# ಕರ್ನಾಟಕ ವಿಧಾನ ಪರಿಷತ್ತು

1) ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 55 (535)
2) ಸದಸ್ಯರ ಹೆಸರು : ಶ್ರೀ ಎಂ. ನಾಗರಾಜು (ವಿಧಾನ ಸಭೆಯಿಂದ ಚುನಾಯಿತರಾದವರು)
3) ಉತ್ತರಿಸುವ ದಿನಾಂಕ : 12.12.2024
4) ಉತ್ತರಿಸುವವರು : ಮಾನ್ಯ ಮುಖ್ಯಮಂತ್ರಿಗಳು

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ನಕಲಿ ಇನ್ ವಾಯ್ಸ್ ಸೃಷ್ಟಿಸಿ ಕೋಟ್ಯಾಂತರ ರೂಪಾಯಿಗಳ ಸರಕು ಮತ್ತು ಸೇವಾ ತೆರಿಗೆಯ (ಜಿ.ಎಸ್.ಟಿ) ವಂಚನೆಗಿಳಿದಿರುವ ಕಂಪನಿಗಳ ವಿರುದ್ಧ ಕೇಂದ್ರ ಸರ್ಕಾರದ ಹಣಕಾಸು ಇಲಾಖೆ ಕಾರ್ಯಾಚರಣೆಯನ್ನು ನಡೆಸಿ ಕಳೆದ ಮೂರು ವರ್ಷಗಳಲ್ಲಿ ಕರ್ನಾಟಕದಲ್ಲಿ ಬರೋಬ್ಬರಿ 3.72 ಲಕ್ಷ ಕಂಪನಿಗಳ ನೋಂದಣಿಗಳನ್ನು ಕೇಂದ್ರ ರದ್ದು ಮಾಡಿರುವುದು ರಾಜ್ಯ ಸರ್ಕಾರದ ಗಮನದಲ್ಲಿ ಇದೆಯೇ; | ಸರ್ಕಾರದ ಗಮನಕ್ಕೆ ಬಂದಿದೆ. ಆದರೆ ಎಲ್ಲಾ 3.72 ಲಕ್ಷ ರದ್ದುಗೊಂಡಿರುವ ನೋಂದಣಿಗಳು, ನಕಲಿ ಇನ್‌ವಾಯ್ಸ್ ಸೃಷ್ಟಿಸಿ ಕೋಟ್ಯಾಂತರ ರೂಪಾಯಿಗಳ ತೆರಿಗೆ ವಂಚನೆಗಿಳಿದಿರುವ ನೋಂದಣಿಗಳಾಗಿರುವುದಿಲ್ಲ. |
| ಆ) | ಜಿ.ಎಸ್.ಟಿ ವಂಚನೆಗಾಗಿಯೇ ನಕಲಿ ದಾಖಲಾತಿ ಸೃಷ್ಟಿಸಿ ಯಾವುದೇ ಸರಕುಗಳನ್ನು ಪೂರೈಸದೇ ನಕಲಿ ಇನ್ ವಾಯ್ಸ್ ಗಳನ್ನು ಸೃಷ್ಟಿಸಿ ಇನ್ ಪುಟ್ ಟ್ಯಾಕ್ಸ್ ಕ್ರೆಡಿಟ್ (ಐ.ಟಿ.ಸಿ) ಪಡೆಯಲು ಪ್ರಯತ್ನಿಸಿ ಸಿಕ್ಕಿಬಿದ್ದಿರುವ ಕಂಪನಿಗಳ ಸಂಖ್ಯೆ ಎಷ್ಟು; | 2,437 |
| ಇ) | ಈ ತೆರಿಗೆ ವಂಚನೆ ಅಕ್ರಮವನ್ನು ತಡೆಗಟ್ಟಲು ಸರ್ಕಾರದಿಂದ ನೇಮಕಗೊಂಡ ಜಾರಿ ವಿಭಾಗದ ಅಧಿಕಾರಿಗಳು ಎಷ್ಟು ತೆರಿಗೆ ವಂಚನೆ ಪ್ರಕರಣಗಳನ್ನು ದಾಖಲು ಮಾಡಿದ್ದರೆ; ಈ ಪ್ರಕರಣಗಳ ಪ್ರಸ್ತುತ ಹಂತವೇನು; ಮತ್ತು ಯಾವ ಯಾವ ರಾಜ್ಯದ ಉದ್ಯಮಿಗಳು ಈ ವಂಚನೆಯಲ್ಲಿ ಹೆಚ್ಚಾಗಿ ಭಾಗಿಯಾಗಿದ್ದಾರೆ; (ಕರ್ನಾಟಕ ರಾಜ್ಯವನ್ನು ಹೊರತುಪಡಿಸಿ) | ರಾಜ್ಯ ವಾಣಿಜ್ಯ ತೆರಿಗೆಗಳ ಇಲಾಖೆಯ ಜಾರಿ ವಿಭಾಗದಿಂದ 752 ಪ್ರಕರಣಗಳಲ್ಲಿ ತಪಾಸಣೆ ಕೈಗೊಳ್ಳಲಾಗಿದೆ. ಸದರಿ ಪ್ರಕರಣಗಳಲ್ಲಿ 429 ಪ್ರಕರಣಗಳಿಗೆ ನ್ಯಾಯನಿರ್ಣಯ ಪ್ರಕ್ರಿಯೆಗೆ ಕ್ರಮ ಕೈಗೊಳ್ಳಲಾಗಿದೆ. ಉಳಿದ ಪ್ರಕರಣಗಳು ಲೆಕ್ಕಪರಿಶೋಧನೆ ಮತ್ತು ಪರಿಶೀಲನೆಯ ಹಂತದಲ್ಲಿವೆ. ವಿವಿಧ ರಾಜ್ಯಗಳ ವ್ಯಕ್ತಿಗಳು ನಕಲಿ ದಾಖಲೆ ಸೃಷ್ಟಿಸಿ ನೋಂದಣಿಯನ್ನು ಪಡೆದು ತೆರಿಗೆ ವಂಚಿಸಿರುವ ಪ್ರಕರಣಗಳು ಈ ಕೆಳಕಂಡಂತೆ ಇರುತ್ತವೆ. |

| ರಾಜ್ಯಗಳು | ತೆರಿಗೆದಾಯಕ ವ್ಯಕ್ತಿಗಳ ಸಂಖ್ಯೆ |
|---|---|
| ತಮಿಳುನಾಡು | 110 |
| ದೆಹಲಿ | 18 |
| ಕರ್ನಾಟಕ | 399 |
| ಮಹಾರಾಷ್ಟ್ರ | 45 |
| ರಾಜಸ್ಥಾನ | 51 |
| ಗುಜರಾತ್ | 21 |

| | |
|---|---|
| ಒಡಿಶಾ | 6 |
| ಉತ್ತರ ಪ್ರದೇಶ | 36 |
| ಪಶ್ಚಿಮ ಬಂಗಾಳ | 7 |
| ಅಸ್ಸಾಂ | 10 |
| ಆಂಧ್ರ ಪ್ರದೇಶ | 8 |
| ಹರಿಯಾಣ | 5 |
| ತೆಲಂಗಾಣ | 10 |
| ಮಧ್ಯ ಪ್ರದೇಶ | 6 |
| ಬಿಹಾರ | 8 |
| ಗೋವಾ | 2 |
| ಕೇರಳ | 9 |
| ಛತ್ತೀಸ್ ಗಢ | 1 |

| | | |
|---|---|---|
| ಈ) | ರಾಜ್ಯದ ಸರಕು ಮತ್ತು ಸೇವಾ ತೆರಿಗೆ ಕಛೇರಿಯಲ್ಲಿ ಬಹುತೇಕ ಸಿಬ್ಬಂದಿ ಹೊರಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವುದು ನಿಜವೇ; ಈ ಕಛೇರಿಗಳಲ್ಲಿ ಖಾಯಂ ಸಿಬ್ಬಂದಿಗಳನ್ನು ನೇಮಕ ಮಾಡಿಕೊಳ್ಳಲು ಇರುವ ಅಡಚಣೆಗಳೇನು? | ವಾಣಿಜ್ಯ ತೆರಿಗೆಗಳ ಇಲಾಖೆಯಲ್ಲಿ ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಹೆಚ್ಚಿನ ಸಂಖ್ಯೆಯ ಅಧಿಕಾರಿಗಳು ಹಾಗೂ ನೌಕರರು ರಾಜ್ಯ ಸರ್ಕಾರದ ಖಾಯಂ ನೌಕರರಾಗಿರುತ್ತಾರೆ.<br><br>ಈಗಾಗಲೇ ಕರ್ನಾಟಕ ಲೋಕಸೇವಾ ಆಯೋಗದಲ್ಲಿ ವಾಣಿಜ್ಯ ತೆರಿಗೆ ಪರಿವೀಕ್ಷಕರು ಹಾಗೂ ದ್ವಿತೀಯ ದರ್ಜೆ ಸಹಾಯಕರ ಹುದ್ದೆಗಳ ನೇರ ನೇಮಕಾತಿ ಪ್ರಕ್ರಿಯೆ ವಿವಿಧ ಹಂತದಲ್ಲಿರುತ್ತವೆ ಹಾಗೂ ಪ್ರಥಮ ದರ್ಜೆ ಸಹಾಯಕರ ಹುದ್ದೆಯ ನೇಮಕಾತಿಗಾಗಿ ಅನುಮತಿ ನೀಡುವ ಬಗ್ಗೆ ಸರ್ಕಾರದ ಹಂತದಲ್ಲಿ ಪರಿಶೀಲನೆಯಲ್ಲಿದೆ.<br><br>ಸರ್ಕಾರದ ಸುತ್ತೋಲೆ ಸಂಖ್ಯೆ: ಆಇ 02 ಬಿಇಎನ್ 2021, ದಿನಾಂಕ: 24-11-2021ರನ್ವಯ ಶೀಘ್ರಲಿಪಿಗಾರರ, ದತ್ತಾಂಶ ನಮೂದಕ ಸಹಾಯಕರು/ಬೆರಳಚ್ಚುಗಾರರ, ವಾಹನ ಚಾಲಕರ ಹಾಗೂ 'ಡಿ' ದರ್ಜೆ ನೌಕರರ ನೇಮಕಾತಿಯನ್ನು ಹೊರಗುತ್ತಿಗೆ ಆಧಾರದ ಮೇಲೆಯೇ ಮಾಡಬೇಕಾಗಿರುತ್ತದೆ. |

ಸಂಖ್ಯೆ: ಆಇ 62 ಸಿಎಸ್‌ಎಲ್ 2024

(ಸಿದ್ದರಾಮಯ್ಯ)
ಮುಖ್ಯಮಂತ್ರಿ